**ಸಾಕ್ಷಿಯನ್ನು ದಿನಾಂಕಃ-17-08-2024ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ.ಎ ಸಿ ಎನ್ ವಕೀಲರಿಂದಃ-**

ನಾನು ದ್ವಿತಿಯ ಪಿಯುಸಿ ಓದಿದ್ದೇನೆ. ನನ್ನ ಜನ್ಮ ದಿನಾಂಕ 15-04-2000. ನನ್ನ ಜನ್ಮ ದಿನಾಂಕ ಪುಷ್ಟೀಕರಿಸಲು ಶಾಲಾ ದಾಖಲಾತಿಗಳನ್ನು ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ಆಧಾರಕಾರ್ಡ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಆಧಾರಕಾರ್ಡನಲ್ಲಿ ಜನ್ಮ ದಿನಾಂಕಗಳು ಹೆಚ್ಚು ಕಡಿಮೆ ನಮೂದಾಗಿರುತ್ತವೆ ಎಂದರೆ ಸರಿ.ಅಪಘಾತವಾಗುವ ಸಮಯದಲ್ಲಿ ನನಗೆ 27ವರ್ಷ ಮೇಲ್ಪಟ್ಟು ವಯಸ್ಸಾಗಿತ್ತು ಎಂದರೆಸರಿಯಲ್ಲ. ನನಗೆ 23ವರ್ಷ ವಯಸ್ಸಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಾಲಾಜಿ ಬೇಕರ್ಸನಲ್ಲಿ ಏಜೆಂಟಾಗಿ

ಕೆಲಸ ಮಾಡುತ್ತಿದ್ದೆ. ನಿಪಿ-12 ರಲ್ಲಿ ಸಹಿ ಮತ್ತು ಸೀಲು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಗಣಕೀಕೃತವಾಗಿ ದಾಖಲೆಗಳು ಬರುತ್ತವೆ ಎಂದು ಹೇಳುತ್ತಾರೆ. ಗಣಕೀಕೃತವಾಗಿದ್ದರಿಂದ ಸೀಲು ಮತ್ತು ಸಹಿ ಹಾಕಿಲ್ಲ ಎಂದು ದಾಖಲಾತಿ ಮೇಲೆ ಬರೆದಿರುತ್ತಾರೆ ಎಂದರೆ ಸರಿ. ನಾನು ವ್ಯಾಪಾರ ಮತ್ತು ವಿತರಕರು ಅಂತಾ ಕೆಲಸ ಮಾಡಿ ತಿಂಗಳಿಗೆ 40 ಸಾವಿರ ರೂಪಾಯಿಗಳನ್ನು ಗಳಿಸುತ್ತಿದ್ದೆ ಎಂದು ತೋರಿಸುವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ವ್ಯಾಪಾರದ ಆಧಾರದ ಮೇಲೆ ಶೇಕಡಾವಾರು ಕೊಡುತ್ತಾರೆ ಎಂದು ಹೇಳುತ್ತಾರೆ. ಶೇಕಡಾವಾರು ಕೊಡುತ್ತಾರೆ ಎಂದು ತೋರಿಸುವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

ಅಪಘಾತವು ದಿನಾಂಕ 30-09-2022 ರಂದು ಸಾಯಂಕಾಲ 5-30 ಗಂಟೆಗೆ ಆಗಿದೆ. ಟಾಟಾ ಗೂಡ್ಸ ವಾಹನ ಮತ್ತು ದ್ವಿಚಕ್ರ ವಾಹನದ ಮಧ್ಯ ಅಪಘಾತವಾಗಿದೆ. ಟಾಟಾ ಗೂಡ್ಸ ವಾಹನಕ್ಕೆ ನಾನು ಹಿಂದಿನಿಂದ ಹಾಯಿಸಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಾಹನ ವೇಗವಾಗಿ ಹೋಗುತ್ತಿದ್ದು, ಯಾವುದೇ ಸೂಚನೆ ಕೊಡದೇ ಬ್ರೆಕ್ ಹಾಕಿದ್ದರಿಂದ ನನ್ನ ವಾಹನ ಡಿಕ್ಕಿಹೊಡೆದಿದೆ ಎಂದು ಹೇಳುತ್ತಾರೆ. ಮಹಾಂತೇಶ ನಾಗರಾಳ ಇವರು ಪ್ರಥಮ ವರ್ತಮಾನ ಹೇಳಿಕೆಯನ್ನು ನೀಡಿದ್ದಾರೆ. ನನ್ನ ದ್ವಿಚಕ್ರ ವಾಹನದ ಹಿಂದಿನ ಸೀಟಿನಲ್ಲಿ ಅವಿನಾಶ ಸುರೇಶ್ ಕುಡೆ ಇವರು ಕುಳಿತ್ತಿದ್ದರು. ಪ್ರಥಮ ವರ್ತಮಾನ ಹೇಳಿಕೆಯಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ಪ್ರಥಮ ವರ್ತಮಾನ ಹೇಳಿಕೆಯಲ್ಲಿ ನಾನು ಅತೀ ವೇಗವಾಗಿ ವಾಹನವನ್ನು ಚಲಾಯಿಸಿಕೊಂಡು ಹೋಗಿ ಗೂಡ್ಸ ವಾಹನಕ್ಕೆ ಡಿಕ್ಕಿ ಹೊಡೆದಿದ್ದೇನೆ ಎಂದು ಬರೆಸಿದ್ದಾರೆ ಎಂದರೆ ಸರಿಯಲ್ಲ.ದೋಷಾರೋಪಣಾ ಪಟ್ಟಿಯಲ್ಲಿ ನನ್ನನ್ನು 2ನೇ ಆರೋಪಿ ಎಂದು ತೋರಿಸಿದ್ದಾರೆ ಎಂದರೆ ಸರಿ. ನಾನು ಕ್ರಿಮಿನಲ್ ಕೇಸಿನಲ್ಲಿ ದಂಡ ತುಂಬಿದ್ದೇನೆ ಎಂದರೆ ಸರಿ. ಅಪಘಾತವಾದ ನಂತರ ನಾನು ಡಾಃ ಕುಸಬಿ ಆಸ್ಪತ್ರೆಗೆ ದಾಖಲಾಗಿದ್ದೆ. ಅಪಘಾತದಲ್ಲಿ ನನ್ನ ಎಡಗಾಲಿಗೆ, ಎಡಭುಜಕ್ಕೆ, ಮೊಣಕಾಲಿಗೆ ಏಟಾಗಿತ್ತು. ನನಗೆ ಶಸ್ತ್ರ ಚಿಕಿತ್ಸೆ ಆಗಿಲ್ಲ ಅನ್ನುವುದು ಸರಿಯಲ್ಲ. ನನಗೆ ಕೇವಲ ಪ್ಲಾಸ್ಟರ ಹಾಕಿ ಚಿಕಿತ್ಸೆ ಕೊಟ್ಟು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು 20ದಿನ ಒಳರೋಗಿಯಾಗಿ ಚಿಕಿತ್ಸೆ ತೆಗೆದುಕೊಂಡಿದ್ದೇನೆ. ನಾನು 20 ದಿನ ಒಳರೋಗಿಯಾಗಿ ಚಿಕಿತ್ಸೆ ತೆಗೆದುಕೊಂಡು ಬಿಡುಗಡೆಯಾಗಿದ್ದೇನೆ ಎಂದು ತೋರಿಸುವ ಡಿಸ್ಚಾರ್ಜ ಸರ್ಟಿಫಿಕೇಟನ್ನು ಹಾಜರುಪಡಿಸಿದ್ದೇನೆ. ನ್ಯಾಯಾಲಯಕ್ಕೆ ಎಡಗಾಲಿಗೆ ಸಂಬಂಧಪಟ್ಟಂತೆ ಎಕ್ಸರೇಯನ್ನು ಹಾಜರುಪಡಿಸಿದ್ದೇನೆ. ನನಗೆ ಅಪಘಾತದಲ್ಲಿ ಎಡಗಾಲಿನ ಮೊಣಕಾಲಿಗೆ ಮತ್ತು ಎಡಭುಜಕ್ಕೆ

ಪೆಟ್ಟಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎರಡುವರೆ ಲಕ್ಷ ರೂಪಾಯಿ ಮೇಲ್ಪಟ್ಟು ಚಿಕಿತ್ಸೆಗಾಗಿ ಖರ್ಚು ಮಾಡಿದ್ದೇನೆ. ನನ್ನ ಹೆಚ್ಚಿನ ಚಿಕಿತ್ಸೆಗೆ ಇನ್ನು ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ ಅಂತಾ ತೋರಿಸುವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಮೌಖಿಕವಾಗಿ ಹೇಳಿದ್ದಾರೆ ಎಂದು ಹೇಳುತ್ತಾರೆ. ನಾನು ಚಿಕಿತ್ಸೆಗಾಗಿ ಎರಡುವರೆ ಲಕ್ಷ ರೂಪಾಯಿ ಖರ್ಚು ಮಾಡಿದ್ದು ಇನ್ನು ಹೆಚ್ಚಿನ ಚಿಕಿತ್ಸೆಗೆ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಗುಣಮುಖವಾದ ನಂತರ ಬಿಡುಗಡೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಮತ್ತೆ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಂಡಿದ್ದೇನೆ ಎಂದು ತೋರಿಸುವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಅನ್ನುವುದು ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ.

ನನ್ನ ತಮ್ಮ ಒಕ್ಕಲುತನ ಮಾಡುತ್ತಾನೆ. ನಮ್ಮ ಮನೆಯಲ್ಲಿ ನಾನು ಒಬ್ಬನೇ ದುಡಿಯುತ್ತಿದ್ದು, ನಮ್ಮ ಕುಟುಂಬದವರು ನನ್ನ ಆದಾಯದ ಮೇಲೆ ಅವಲಂಬಿತರಾಗಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಕೆಎ-25/ಎಬಿ-6116 ರ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಅನ್ನುವುದು ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದ್ದರಿಂದ ಪರಿಹಾರ ಧನ ಪಡೆಯುವ ಉದ್ದೇಶದಿಂದ ಪೋಲಿಸರೊಂದಿಗೆ ಶಾಮೀಲಾಗಿ ಒಂದು ದಿನ ಬಿಟ್ಟು ಪ್ರಥಮ ವರ್ತಮಾನ ಹೇಳಿಕೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಅಪಘಾತಕ್ಕೂ ಮತ್ತು ಟಾಟಾ ಇಂಟ್ರಾ ವಾಹನಕ್ಕೂ ಯಾವುದೇ ಸಂಬಂಧ ಇಲ್ಲ ಅನ್ನುವುದು ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ-</u> 3ನೇ ಎದುರುದಾರರ ಪರ ವಕೀಲರು ಹಾಜರ ಇದ್ದು, ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಸಹಿ/-
ಸದಸ್ಯರು ಮೋ.ವಾ.ಅ. ಮಂಡಳಿ-5,
ಜಮಖಂಡಿ.